<u>ಅಸಲು ದಾವಾ ನಂಃ 68/2019</u>
ಡಿ.ಡಬ್ಲು - 3 ಆನಂದ ಕುರಿ

<u>ಸಾಕ್ಷಿಯನ್ನು ದಿನಾಂಕಃ 22.11.2025 ರಂದು ಪುನಃ ಸಾಕ್ಷಿ ಕರೆಯಿಸಿ, ಪ್ರಮಾಣೀಕರಿಸಲಾಯಿತು.</u>
<u>ಪಾಟೀ ಸವಾಲುಃ ಪ್ರತಿವಾದಿ ನಂ. 1 ರಿಂದ 9 ಪರ ಶ್ರೀ ಐ. ಎಂ. ಕೆ ವಕೀಲರಿಂದಃ</u>

1. ನಮ್ಮ ತಂದೆಯ ಮದುವೆ 10 ನೇ ಪ್ರತಿವಾದಿಯ ಜೊತೆಗೆ 1981 ರಲ್ಲಿ ಆಗಿರುತ್ತದೆ. ಸದರಿಯವರ ಮದುವೆಯು ಅಬ್ಬಿಗೇರಿಯ ಕಂಠಿಬಸವೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ. ಸದರಿ ಮದುವೆಯ ಬಗ್ಗೆ ಮದುವೆ ಆಮಂತ್ರಣ ಪತ್ರಿಕೆ ಸಿಕ್ಕಿಲ್ಲ ನನ್ನ ತಂದೆ ದೇವಸ್ಥಾನದಲ್ಲಿ ಮದುವೆಯಾಗದ ಬಗ್ಗೆ ಹೇಳುತ್ತಿದ್ದರು. ನಾನು ಪಿ.ಯು.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ.

2. ಸಾಕ್ಷಿಗೆ ನಿಡಿ -9 ನ್ನು ತೋರಿಸಿ, ಸದರಿ ದಾಖಲೆಯ ಪ್ರಕಾರ ದಿಃ 28-06-1982 ರಂದು ವಾದಿ ಮತ್ತು ಪೋತಿ ನಿಂಗಪ್ಪರವರ ಮದುವೆಯು ಅಬ್ಬಿಗೇರಿಯ ಕಂಠಿಬಸವೇಶ್ವರ ದೇವಸ್ಥಾನದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ಒಪ್ಪಿಕೊಂಡಿರುತ್ತಾರೆ. ನಿಡಿ -8 ರಲ್ಲಿ ನಿಂಗಪ್ಪ, ಶಿವಾನಂದಪ್ಪ ಮತ್ತು ಪ್ರತಿವಾದಿ 8 ರವರು ಇರುತ್ತಾರೆ ಎಂದರೆ ಸಾಕ್ಷಿಯು ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 10 ರವರು ನಿಂಗಪ್ಪನ ಹೆಂಡತಿಯಲ್ಲ ಎಂದರೆ ಸುಳ್ಳು. ವಾರಸಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನಾನು ಸದರಿ ನಿಂಗಪ್ಪನ ವಾರಸುದಾರರು ಎಂದು ವಾರಸಾ ಪ್ರಮಾಣ ಪತ್ರವನ್ನು ತೆಗೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾರಸಾ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ. ಅಸಲು ದಾವಾ ನಂಬರ 7/2019 ರಲ್ಲಿ ಪ್ರತಿವಾದಿ 8 ಮತ್ತು 9 ರವರ ವಿಚಾರಣೆ ಆಗದೆ ಡಿಕ್ರಿಯಾಗಿದ್ದರಿಂದ ಅದರ ವಿರುದ್ಧ ಸದರಿ ಪ್ರತಿವಾದಿಗಳು ಎಂ. ಎಫ್.ಎ ನಂಬರ 101788/2020 ಅಪೀಲು ಸಲ್ಲಿಸಿದ್ದು ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಹೈಕೋರ್ಟನಲ್ಲಿ ನಾನು ವಕೀಲರ ಮುಖಾಂತರ ಹಾಜರಾಗಿರುತ್ತೇನೆ. ನಾನು ಮತ್ತು ಪ್ರತಿವಾದಿ ನಂಬರ 10 ರವರು ಪೋತಿ ನಿಂಗಪ್ಪನ ಮಗ ಮತ್ತು ಹೆಂಡತಿ ಇರುವುದಿಲ್ಲ, ಆದರೂ ಸಹ ಪ್ರತಿವಾದಿ ನಂಬರ 8 ಮತ್ತು 9 ರವರ ಆಸ್ತಿಗಳನ್ನು ಎತ್ತಿಹಾಕುವ ಉದ್ದೇಶದಿಂದ ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪೋತಿ ನಿಂಗಪ್ಪನ ಕುಟುಂಬದ ಮೂಲ ಪುರುಷ ಯಮನಪ್ಪ. ನಮ್ಮ ಕುಟುಂಬದ ಮೂಲ ಪುರುಷನ ಹೆಸರು ನಿಂಗಪ್ಪ ಎಂದು ಇದ್ದು, ಸದರಿ ಕುಟುಂಬದ ಬಗ್ಗೆ ನನಗೆ ಏನು ಮಾಹಿತಿ ಇಲ್ಲದಿದ್ದರೂ ಸಹ ಮೂಲ ಪುರುಷ ಯಮನಪ್ಪ ಎಂದು ಸುಳ್ಳು ಸಾಕೆ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 8 ರವರ ಹೆಸರು ಮತ್ತು 10 ರವರ ಹೆಸರು ಶಾಂತವ್ವ ಎಂದು ಇದ್ದು, ಆ ಹೆಸರನ್ನು ದುರುಪಯೋಗ ಪಡಿಸಿಕೊಂಡು ನನ್ನ ತಾಯಿ ಶಾಂತವ್ವ ಪೋತಿ ನಿಂಗಪ್ಪನ ಹೆಂಡತಿ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಗಳ ಸರ್ವೇ ನಂಬರ 242 ಮತ್ತು ಇನ್ನೊಂದು ಆಸ್ತಿ ಇರುತ್ತದೆ ಅದರ ನಂಬರ ನೆನಪಿಲ್ಲ. ನಾನು ಪೋತಿ ನಿಂಗಪ್ಪನಿಗೆ ಮಗನಲ್ಲ, ಮತ್ತು ಪ್ರತಿವಾದಿ 10 ರವರು ನಿಂಗಪ್ಪನ ಹೆಂಡತಿ ಇಲ್ಲದಿದ್ದರೂ ಸಹ ಜಿಲ್ಲಾ ನ್ಯಾಯಾಲಯದಲ್ಲಿ ಪಡೆದುಕೊಂಡಿರುವ ಸುಳ್ಳು ಡಿಕ್ರಿ ಆಧರಿಸಿ ಹೆಂಡತಿ ಮತ್ತು ಮಗ ಇರುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಡಿಕ್ರಿಯನ್ನು ಬಿಟ್ಟು ನ್ಯಾಯಾಲಯಕ್ಕೆ ನಾನು ಮತ್ತು ಪ್ರತಿವಾದಿ 10 ರವರು ಪೋತಿ ನಿಂಗಪ್ಪನ ಹೆಂಡತಿ ಮತ್ತು ಮಗ ಎಂದು

ತೋರಿಸಲು ದಾಖಲೆ ಹಾಜರು ಪಡಿಸಿಲ್ಲ. ಹೈಕೋರ್ಟನಲ್ಲಿ ದಾಖಲೆ ಹಾಜರು ಪಡಿಸಿರುತ್ತೇನೆ.

**<u>ಅಸಲು ದಾವಾ ನಂಃ 68/2019</u>**
**ಡಿ.ಡಬ್ಲ್ಯು - 3 ಆನಂದ ಕುರಿ**

4. 2 ದಾಖಲೆಗಳನ್ನು ಮಾತ್ರ ಹಾಜರು ಪಡಿಸಿರುತ್ತೇನೆ. ಉಳಿದ ದಾಖಲೆಗಳು ಹೈಕೋರ್ಟನಲ್ಲಿ ಕೊಟ್ಟಿರುತ್ತೇನೆ. ಆ 2 ದಾಖಲೆಗಳು ಯಾವವು ಎಂದು ನೆನಪಿಲ್ಲ. ಆ ದಾಖಲೆಗಳನ್ನು ತಂದು ಹಾಜರು ಪಡಿಸಲು ತೊಂದರೆಯಿಲ್ಲ. ನ್ಯಾಯಾಲಯಕ್ಕೆ ಸತ್ಯ ಸಂಗತಿ ಗೊತ್ತಾಗುತ್ತದೆ ಎಂದು ಯಾವುದೇ ದಾಖಲೆಗಳನ್ನು ಹಾಜರು ಪಡಿಸದೇ ಇದ್ದರೂ ಸಹ ಹಾಜರು ಪಡಿಸುತ್ತೇನೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 8 ಮತ್ತು 9 ರವರು ಪೋತಿ ನಿಂಗಪ್ಪನ ಕಾನೂನುಬದ್ದ ವಾರಸುದಾರರು ಇರುತ್ತಾರೆ ಎಂದರೆ ಸುಳ್ಳು. ನನ್ನ ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

-ಸಹಿ-
ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.